CC.No.: 637/2018
P.W.:1

ಈ ದಿನ ದಿಃ 03.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜೆ.ಹೆಚ್.ಕೆ ವಕೀಲರಿಂದಃ**

ಲಿಯಾ ಎಂಟರ್ ಪ್ರೈಸಸ್ ನನ್ನ ಮಾಲೀಕತ್ವದ ಉದ್ದಿಮೆ ಎಂದರೆ ಸರಿ. ನಾನು ಸದರಿ ಉದ್ದಿಮೆಯನ್ನು 2016 ರಿಂದ ನಡೆಸುತ್ತಿದ್ದೇನೆ. ಸದರಿ ಉದ್ದಿಮೆಯು ಮೊಬೈಲ್ ವಿತರಣೆಗೆ ಸಂಬಂಧಪಟ್ಟಿದ್ದು. ನಾನು ಸ್ಯಾಮ್ ಸಂಗ್ ಮೊಬೈಲ್‌ಗಳನ್ನು ಮಾತ್ರ ವಿತರಣೆ ಮಾಡುತ್ತೇನೆ. ಸದರಿ ಕಂಪನಿಯ ಮೊಬೈಲ್ ಗಳನ್ನು ಹೊರತುಪಡಿಸಿ ನಾನು ಯಾವುದೇ ಬೇರೆ ಕಂಪನಿಯ ಮೊಬೈಲ್‌ಗಳ ವಿತರಕಳಲ್ಲ ಎಂದರೆ ಸರಿ. ನನಗೆ ಸದರಿ ಕಂಪನಿಯಿಂದ ಇನ್ವಾಯ್ಸ್ ಆಗಿ ಬಂದಂತಹ ಮೊಬೈಲ್ ಗಳನ್ನು ನಾನು ಬೇರೆಯವರಿಗೆ ಇನ್‌ವಾಯ್ಸ್ ಮೂಲಕ ವಿತರಣೆ ಮಾಡುತ್ತೇನೆಂದರೆ ಸರಿ. ನಾನು ಹಾರೋಹಳ್ಳಿ ಮತ್ತು ಕನಕಪುರಕ್ಕೆ ಮೊಬೈಲ್ ವಿತರಣೆ ಮಾಡುತ್ತೇನೆ. ನಾವು ಬಿಲ್ ಮಾಡಿ ಅಂಗಡಿಗಳಿಗೆ ಮೊಬೈಲ್ ಗಳನ್ನು ವಿತರಿಸುತ್ತೇವೆ. ನಾವು ನೇರವಾಗಿ ಗ್ರಾಹಕರಿಗೆ ವಿತರಿಸುವುದಿಲ್ಲ. ನಾನು ಸದರಿ ಉದ್ದಿಮೆಯ ಮಾಲೀಕಳು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ನಾನು ಸದರಿ ಉದ್ದಿಮೆಯ ಮಾಲೀಕಳಲ್ಲ ಹಾಗೂ ಈ ದೂರನ್ನು ಸಲ್ಲಿಸುವ ಸಮಯದಲ್ಲಿ ನನ್ನ ಬಳಿ ಆ ಬಗ್ಗೆ ದಾಖಲೆಗಳು ಇರದ ಕಾರಣ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಕಂಪನಿಯವರೆ ನನ್ನನ್ನು ಅಂಗಡಿಯವರ ಬಳಿ ಕರೆದುಕೊಂಡು ಹೋಗುತ್ತಾರೆ. ಆ ರೀತಿ ನನ್ನನ್ನು ಸುಮುಖ ಕಮ್ಯೂನಿಕೇಷನ್ ಮತ್ತು ನೇಸರ ಮೊಬೈಲ್ ಟೆಲಿಕಾಂ ಅಂಗಡಿಗೆ ಕರೆದುಕೊಂಡು ಹೋಗಿದ್ದರು. ನನಗೆ ಸುಮುಖ ಕಮ್ಯೂನಿಕೇಷನ್ ರವರನ್ನು 2016 ರಲ್ಲಿ ಪರಿಚಯಿಸಿಕೊಟ್ಟಿರುತ್ತಾರೆ. ಪರಿಚಯ ಮಾಡಿಸಿಕೊಟ್ಟ ದಿನಾಂಕ ಹಾಗೂ ತಿಂಗಳು ನನಗೆ ಗೊತ್ತಿಲ್ಲ. ನಾನು ಸುಮುಖ ಕಮ್ಯೂನಿಕೇಷನ್ ರವರಿಗೆ ಮೊಬೈಲ್ ಹ್ಯಾಂಡ್ ಸೆಟ್ ಗಳನ್ನು ಮಾರಾಟ ಮಾಡುವಾಗ ಇನ್ ವಾಯ್ಸ್ ಮುಖಾಂತರ ಮಾಡಿರುತ್ತೇನೆಂದರೆ ಸರಿ. ಸದರಿ ಇನ್ ವಾಯ್ಸ್ ಗಳನ್ನು ನಾವು ಸ್ಯಾಮ್ ಸಂಗ್

ಕಂಪನಿಗೂ ಸಹ ಕಳುಹಿಸಿಕೊಟ್ಟಿರುತ್ತೇವೆಂದರೆ ಸರಿ. ಆದೇ ರೀತಿ ನಾನು ಸ್ಟೇಟ್ ಮೆಂಟ್ ಆಫ್ ಅಕೌಂಟ್ ನ್ನು ಕೂಡಾ ನಿರ್ವಹಿಸಿರುತ್ತೇನೆಂದರೆ ಸರಿ. ನಾನು ಎಷ್ಟು ಮೊಬೈಲ್ ಹ್ಯಾಂಡ್ ಸೆಟ್ ಗಳನ್ನು ಆರೋಪಿಯ ಅಂಗಡಿಗೆ ನೀಡಿರುತ್ತೇನೆಂದರೆ ಸಾಕ್ಷಿಯು ಬಿಲ್ಲನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಯಾವುದೇ ಬಿಲ್ಲುಗಳನ್ನು ಈವರೆಗೂ ಹಾಜರು ಮಾಡಿಲ್ಲ ಎಂದರೆ ಸರಿ. ಆರೋಪಿಯು ಸದರಿ ಮೊಬೈಲ್ ಗಳನ್ನು ಪಡೆದುಕೊಂಡಿದ್ದಕ್ಕೆ ನಮ್ಮ ಇನ್ ವಾಯ್ಸ್ ನಲ್ಲಿ ಡಿಲಿವರ್ಡ್ ಎಂದು ರುಜು ಸಹ ಮಾಡಿರುತ್ತಾರೆಂದರೆ ಸರಿ.

2016 ರಿಂದ 2018 ರ ವರೆಗೆ ನಾನು ನನ್ನ ಅಂಗಡಿಯನ್ನು ಮುಚ್ಚುವವರೆಗೆ ಆರೋಪಿಯ ಜೊತೆ ವ್ಯವಹಾರ ಮಾಡಿರುತ್ತೇನೆ. ಇನ್ ವಾಯ್ಸ್ ನಲ್ಲಿನ ಬಾಕಿ ಮೊತ್ತವನ್ನು ನಗದು ಮತ್ತು ಚೆಕ್ ಮೂಲಕ ವ್ಯವಹರಿಸುತ್ತೇವೆಂದರೆ ಸರಿ. ನಮ್ಮ ಉದ್ದಿಮೆಯ ಜೊತೆ ವ್ಯವಹರಿಸಬೇಕಾದ್ದಲ್ಲಿ ನಮಗೆ ಭದ್ರತೆಗಾಗಿ ನಮ್ಮ ಜೊತೆ ವ್ಯವಹರಿಸುವವರು ಚೆಕ್ಕನ್ನು ನೀಡುತ್ತಿದ್ದರು. ನಾವು ಇನ್ ವಾಯ್ಸ್ ಮಾಡಿ ಮೊಬೈಲನ್ನು ಮಾರಾಟ ಮಾಡುವುದಕ್ಕಿಂತ ಮುಂಚೆ ಖಾಲಿ ಚೆಕ್ಕನ್ನು ಪಡೆಯುತ್ತಿರಲಿಲ್ಲ. ನಾವು ಇನ್ ವಾಯ್ಸ್ ಮಾಡಿ ಮೊಬೈಲನ್ನು ವಿತರಣೆ ಮಾಡಿದಾಗ ಸದರಿ ಇನ್ ವಾಯ್ಸ್ ಮೊತ್ತಕ್ಕೆ ಚೆಕ್ಕನ್ನು ಪಡೆದುಕೊಳ್ಳುತ್ತಿದ್ದೇವು.

ನಿಪಿ-1 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ದಿನಾಂಕವನ್ನು ಬರೆದಿರುವ ಬರವಣಿಗೆ ಮತ್ತು ಮೊತ್ತ ಹಾಗೂ ಇತರೆ ಬರವಣಿಗೆಗಳು ಬೇರೆ ಬೇರೆ ಆಗಿರುತ್ತವೆಂದರೆ ಸರಿಯಲ್ಲ. ಸದರಿ ಬರವಣಿಗೆಗಳು ಆರೋಪಿಯದಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ  ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.